# ಯಾವುದು ಹೆಚ್ಚಿನದು ?

## (ಭೂಮವಿದ್ಯೆ - ಛಾಂದೋಗ್ಯೋಪನಿಷತ್ತು)

ಭಾಗ ೨

ಸ್ವಾಮಿ ವೀರೇಶಾನಂದ

ಇದುವರೆಗೆ ಸ್ಮರಣಬ್ರಹ್ಮೋಪಾಸನೆಯನ್ನು ಅಧ್ಯಯನ ಮಾಡಿದ್ದೆವು. ನಾರದನು ತನ್ನ ಗುರುವಾದ ಸನತ್ಕುಮಾರನಿಗೆ ಹೇಳಿದನು: ''ಭಗವಂತನೇ, ಸ್ಮರಣಕ್ಕಿಂತಲೂ ಹೆಚ್ಚಿನದು ಏನಾದರೂ ಇದೆಯೆ?'' ಅದಕ್ಕೆ ಸನತ್ಕುಮಾರನು ಉತ್ತರಿಸಿದನು: ''ಖಂಡಿತವಾಗಿಯೂ ಇದೆ. ಸ್ಮರಣಕ್ಕಿಂತ ಹೆಚ್ಚಿನದು ಖಂಡಿತವಾಗಿಯೂ ಇದೆ.'' ನಾರದನು ಕೇಳಿಕೊಂಡನು: ''ದಯವಿಟ್ಟು ಭಗವಂತನು ನನಗೆ ಅದನ್ನು ಹೇಳಿಕೊಡಬೇಕು.'' ಸನತ್ಕುಮಾರನು ನಾರದನಿಗೆ ಉಪದೇಶ ಮಾಡಲು ಆರಂಭಿಸಿದನು:

**ಆಶಾ:** ಆಶೆಯೇ ಸ್ಮರಣಕ್ಕಿಂತಲೂ ಹೆಚ್ಚಿನದು. ಆಶೆ ಎಂದರೆ ಸಿಗದಿರುವ ವಸ್ತುವಿನ ಮೇಲೆ ಇರುವ ಬಯಕೆ. ಆಶೆ, ತೃಷ್ಣೆ, ಕಾಮ — ಇವೆಲ್ಲವೂ ಪರ್ಯಾಯ ಪದಗಳು. ಇದು ಸ್ಮರಣೆಗಿಂತಲೂ ಹೆಚ್ಚಿನದು. ಇದರ ವಿಧಾನ ಹೀಗಿದೆ: ಅಂತಃಕರಣದಲ್ಲಿರುವ ಆಸೆಯಿಂದಲೇ ಒಬ್ಬನು ತಾನು ಮಾಡಬೇಕಾದ ಕರ್ತವ್ಯವನ್ನು ಸ್ಮರಿಸಿಕೊಳ್ಳುತ್ತಾನೆ. ಹೀಗೆ ಸ್ಮರಣೆಗೆ ಮೂಲವಾದುದು ಆಶೆಯೇ ಆಗಿದೆ. ಸ್ಮರಣೆ ಮಾಡುತ್ತ ಅವನು ಋಗ್ವೇದ ಮುಂತಾದ ವೇದಗಳ ಮಂತ್ರಗಳನ್ನು ಅಧ್ಯಯನ ಮಾಡುತ್ತಾನೆ. ಬ್ರಾಹ್ಮಣಗಳಿಂದ ಅವುಗಳ ಅರ್ಥವನ್ನೂ, ವಿಧಿಗಳನ್ನೂ ಕೇಳಿ ತಿಳಿದುಕೊಳ್ಳುತ್ತಾನೆ. ತದನಂತರವೇ ಫಲದ ಆಶೆಯಿಂದ ಕರ್ಮಗಳನ್ನು ಮಾಡುತ್ತಾನೆ. ಕರ್ಮಫಲವಾಗಿರುವ ಪುತ್ರರನ್ನೂ ಪಶುಗಳನ್ನೂ ಇಚ್ಛಿಸುತ್ತಾನೆ. ಸತ್ತಮೇಲೆ ಲೋಕಗಳಿಗೆ ಹೋಗಲು ಇಚ್ಛಿಸುತ್ತಾನೆ. ಹೀಗೆ ಆಶೆ ಎನ್ನುವುದು ಸ್ಮರಣಕ್ಕಿಂತಲೂ ಹೆಚ್ಚಿನದು. ಹೀಗಾಗಿ ಆಶೆಯನ್ನು ಉಪಾಸನೆ ಮಾಡು.

ನಾರದನು ಸನತ್ಕುಮಾರನನ್ನು ಕೇಳಿಕೊಳ್ಳುತ್ತಾನೆ: ''ಭಗವನ್, ಆಶೆಗಿಂತ ಹೆಚ್ಚಿನದು ಯಾವುದಾದರೂ ಇದೆಯೆ?'' ಸನತ್ಕುಮಾರನು ಉತ್ತರಿಸುತ್ತಾನೆ: ''ಖಂಡಿತ ಇದೆ, ಮಗೂ.'' ನಾರದನು ಪ್ರಾರ್ಥಿಸಿಕೊಳ್ಳುತ್ತಾನೆ, ''ಅದನ್ನು ಭಗವಂತನು ದಯವಿಟ್ಟು ನನಗೆ ಹೇಳಿಕೊಡಬೇಕು.'' ಸನತ್ಕುಮಾರನು ತನ್ನ ಉಪದೇಶವನ್ನು ಮುಂದುವರೆಸುತ್ತಾನೆ.

**ಪ್ರಾಣ:** ಪ್ರಾಣವೇ ಆಶೆಗಿಂತ ಹೆಚ್ಚಿನದು. ಇದುವರೆಗೆ ನಾಮದಿಂದ ಮೊದಲು ಮಾಡಿ, ಆಶೆಯವರೆಗೆ ಕಾರ್ಯಕಾರಣಗಳನ್ನು ಹೇಳಿಯಾಯಿತು. ಈ ಎಲ್ಲವೂ ಎಲ್ಲಿ ಸೇರಿಕೊಂಡಿದೆಯೋ ಅದೇ ಪ್ರಾಣ ಅಥವಾ ಸೂತ್ರಾತ್ಮ. ದಾರವು ಮಣಿಸಮೂಹಗಳನ್ನು ಕಟ್ಟಿಹಾಕಿರುವಂತೆ, ಪ್ರಾಣವು ನಾಮದಿಂದ ಮೊದಲು ಮಾಡಿ, ಆಶೆಯವರೆಗೆ ಎಲ್ಲವನ್ನೂ ಕಟ್ಟಿಹಾಕಿದ್ದಾನೆ. ಈ ಪ್ರಾಣನು ಹೇಗೆ ತಾನೇ ಹೆಚ್ಚಿನವನು? ಗಾಡಿಯ ಚಕ್ರದ ಅರೆಕೋಲುಗಳು ಹೇಗೆ ಗುಂಭದಲ್ಲಿ ಸೇರಿಕೊಂಡಿರುತ್ತವೆಯೋ ಅಥವಾ ಪೋಣಿಸಿಕೊಂಡಿರುತ್ತವೆಯೋ ಅಥವಾ ಒಳಹೊಕ್ಕಿರುವುದೋ ಹಾಗೆಯೇ, ಕನ್ನಡಿಯಲ್ಲಿ ಪ್ರತಿಬಿಂಬವು ಹೊಗುವಂತೆ, ಪರಮಾತ್ಮನು ಜೀವಾತ್ಮರೂಪದಿಂದ ದೇಹದಲ್ಲಿರುವ ಮುಖ್ಯಪ್ರಾಣನಲ್ಲಿ ಒಳಹೊಕ್ಕಿದ್ದಾನೆ. ಕ್ರಿಯಾಕಾರಕ ಸಮೂಹವೆಲ್ಲವೂ ಪ್ರಾಣವೇ ಆಗಿದೆ. ಪ್ರಾಣಕ್ಕಿಂತ ಹೊರಗೆ ಇರುವುದು ಯಾವುದೂ ಇಲ್ಲ. ಯಾರು ಪ್ರಾಣವೇ ನಾನು ಎಂದು ಉಪಾಸನೆ ಮಾಡುತ್ತಾನೆಯೋ, ಅವನು ಅತಿವಾದಿಯಾಗುವನು. ಅಂದರೆ, ನಾಮದಿಂದ ಹಿಡಿದು, ಆಶೆಯವರೆಗೆ — ಇವೆಲ್ಲವನ್ನೂ ಮೀರಿ ನುಡಿಯುವ ಸ್ವಭಾವದವನಾಗುವನು. ಬ್ರಹ್ಮದಿಂದ ಹಿಡಿದು ಸ್ತಂಭದವರೆಗಿನ ಜಗತ್ತಿಗೆಲ್ಲ ಆತ್ಮನಾದ ಪ್ರಾಣನೇ ನಾನು ಎಂಬ ಭಾವನೆಯುಳ್ಳವನಾಗುವನು.

ನಾರದನು ಎಲ್ಲಕ್ಕಿಂತ ಮಿಗಿಲಾದ ಪ್ರಾಣನೇ ತನ್ನ ಆತ್ಮನು, ಸರ್ವರ ಆತ್ಮನು ಎಂಬ ಉಪದೇಶವನ್ನು ಕೇಳಿತಿಳಿದುಕೊಂಡನು. ಇದಕ್ಕಿಂತ ಹೆಚ್ಚಿನದು ಏನೂ ಇಲ್ಲವೆಂದು ಅರಿತುಕೊಂಡು ಸುಮ್ಮನಾದನು. 'ಭಗವಂತನೇ, ಇದಕ್ಕಿಂತ ಹೆಚ್ಚಿನದು ಇದೆಯೆ?' ಎಂದು ಕೇಳಲಿಲ್ಲ. 'ಪ್ರಾಣವೆಂಬುದು ನಿಜವಾದ ಬ್ರಹ್ಮವಲ್ಲ. ಇದು ಅನೃತಬ್ರಹ್ಮ. ಪ್ರಾಣವೆಂಬುದು ಒಂದು ವಿಕಾರರೂಪ. ಇದರ ಜ್ಞಾನದಿಂದಲೇ ತನ್ನ ಶಿಷ್ಯನು ಸಂತುಷ್ಟನಾಗಿ ಬಿಟ್ಟಿರುವನಲ್ಲಾ? ಇಷ್ಟನ್ನು ಮಾತ್ರ ತಿಳಿದುಕೊಂಡರೆ, ಅವನು ಕೃತಾರ್ಥನಾಗುವುದಿಲ್ಲ' — ಹೀಗೆ ಯೋಚಿಸಿಕೊಂಡ ಸನತ್ಕುಮಾರನು ಯೋಗ್ಯಶಿಷ್ಯನಾದ ನಾರದನನ್ನು ತಪ್ಪುತಿಳಿವಳಿಕೆಯಿಂದ ಕಾಪಾಡಬೇಕೆಂದು ಮತ್ತೂ ಉಪದೇಶ ಮಾಡಿದನು:

**ಭೂಮಾ:** ಅಪ್ಪಾ, ನಾರದ! ಪ್ರಾಣವನ್ನು ಅರಿತಿರುವವನು ಮಾತ್ರವೇ ಎಲ್ಲವನ್ನೂ ತಿಳಿದಿರುವವನಲ್ಲ. ಯಾರು ಭೂಮ

ವೆಂದು ಕರೆಯಲಾಗುವ ಎಲ್ಲವನ್ನೂ ಮೀರಿರುವ ತತ್ತ್ವವನ್ನು, ಪರಮಾರ್ಥಸತ್ಯವನ್ನು ಅರಿತಿರುವನೋ, ಅವನು ಮಾತ್ರವೇ ಅತಿವಾದಿಯು (ಎಲ್ಲವನ್ನೂ ತಿಳಿದಿರುವವನು). ಹೀಗಾಗಿ ಭೂಮವೆಂಬ ಹೆಸರಿನ ಸತ್ಯವನ್ನೇ ಜಿಜ್ಞಾಸೆ ಮಾಡಬೇಕು.

**ಸತ್ಯ:** ಆಗ ನಾರದನು ಸನತ್ಕುಮಾರನಿಗೆ ಹೇಳಿದನು: ''ಭಗವಂತನೇ, ನಾನು ಭೂಮವೆಂಬ ಸತ್ಯದಿಂದಲೇ ಅತಿವಾದಿಯಾಗಲು (ಎಲ್ಲವನ್ನೂ ತಿಳಿದುಕೊಳ್ಳಲು) ಇಚ್ಛಿಸುತ್ತೇನೆ. ಹಾಗೆ ಸಿದ್ಧಿಯನ್ನು ಮಾಡಿಕೊಳ್ಳಲು ಭಗವಂತನು ಉಪದೇಶಿಸಬೇಕು.''

ಸನತ್ಕುಮಾರನು ಆಗ ಹೇಳಿದನು: ''ನೀನು ಸತ್ಯದಿಂದಲೇ ಅತಿವಾದಿಯಾಗಲು ಇಚ್ಛಿಸುವೆಯಾದರೆ, ಮೊದಲು ನೀನು ಸತ್ಯವನ್ನು ಜಿಜ್ಞಾಸೆ ಮಾಡಬೇಕು.''

ನಾರದನು ಗುರುಗಳಿಗೆ ಬಿನ್ನವಿಸಿದನು: ''ಹಾಗೇ ಆಗಲಿ, ಭಗವಂತನೇ. ನಾನು ಸತ್ಯವನ್ನೇ ಜಿಜ್ಞಾಸೆ ಮಾಡಲು ಇಚ್ಛಿಸುತ್ತೇನೆ. ನಿನ್ನಿಂದ ಸತ್ಯವನ್ನೇ ಅರಿತುಕೊಳ್ಳಲು ಬಯಸುತ್ತೇನೆ.''

**ಜಿಜ್ಞಾಸೆ:** ಆಗ ಸನತ್ಕುಮಾರನು ಉಪದೇಶಿಸುತ್ತಾನೆ: ''ಯಾವಾಗ ಪರಮಾರ್ಥವಾದ ಸತ್ಯವನ್ನು ಇದು ಪರಮಾರ್ಥ ಸತ್ಯ ಎಂದು ಸರಿಯಾಗಿ ತಿಳಿದುಕೊಳ್ಳುತ್ತಾನೆಯೋ, ಅವನು ಯಾವ ವಿಕಾರದ ಅವಸ್ಥೆಯಲ್ಲಿ ಇದ್ದರೂ, ಸತ್ಯವನ್ನೇ ಎತ್ತಿ ಹಿಡಿಯುತ್ತಾನೆ; ಸತ್ಯವನ್ನೇ ಹೇಳುತ್ತಾನೆ. ಈ ಸತ್ಯದ ಅರಿವು ಆತ್ಮವಿಜ್ಞಾನವನ್ನು ಜಿಜ್ಞಾಸೆ ಮಾಡದೆ ಉಂಟಾಗುವುದಿಲ್ಲ.'' ಇಲ್ಲಿ ವಿಜ್ಞಾನ ಎಂದರೆ ಸತ್ಯವನ್ನು ತಿಳಿದುಕೊಳ್ಳಬೇಕಾದರೆ ಆವಶ್ಯಕವಾದ ಬುದ್ಧಿ ಎಂದು ಅರ್ಥ ಮಾಡಿಕೊಳ್ಳಬಹುದು.

ಅದಕ್ಕೆ ನಾರದನು ಹೇಳುತ್ತಾನೆ: ''ಭಗವಂತನೆ, ನಾನು ವಿಜ್ಞಾನವನ್ನು ಜಿಜ್ಞಾಸೆ ಮಾಡಲು ಇಚ್ಛಿಸುತ್ತೇನೆ.''

**ಮತಿ:** ಸನತ್ಕುಮಾರನು ಉತ್ತರಿಸುತ್ತಾನೆ: ''ಯಾರು ಮನನ ಮಾಡುತ್ತಾನೆಯೋ, ಅವನಿಗೆ ಜಿಜ್ಞಾಸೆಯು ಉಂಟಾಗುತ್ತದೆ ಅಂದರೆ ಅವನು ಸತ್ಯವನ್ನು ಅರಿತುಕೊಳ್ಳುತ್ತಾನೆ. ಹೀಗಾಗಿ ಮತಿಯನ್ನು ಜಿಜ್ಞಾಸೆ ಮಾಡಬೇಕು.'' ನಾರದನು, ''ಭಗವಂತನೇ, ನಾನು ಮತಿಯನ್ನು ಜಿಜ್ಞಾಸೆ ಮಾಡುತ್ತೇನೆ'' ಎಂದನು. ಮತಿ ಎಂದರೆ ಮನನ ಅಥವಾ ತರ್ಕ.

**ಶ್ರದ್ಧೆ:** ಹೀಗೆಯೇ ಸಂಭಾಷಣೆಯು ಮುಂದುವರಿಯುತ್ತದೆ: ಮನನವು ಯಾವುದರಿಂದ ಉಂಟಾಗುತ್ತದೆ? ಶ್ರದ್ಧೆಯಿಂದ ಉಂಟಾಗುತ್ತದೆ. ಯಾರು ಶ್ರದ್ಧೆಯನ್ನು ಹೊಂದಿರುತ್ತಾನೆಯೋ, ಅವನು ಮಾತ್ರವೇ ಮನನಮಾಡುತ್ತಾನೆ. ಶ್ರದ್ಧೆಯಿಲ್ಲದವನು ಮನನ ಮಾಡುವುದಿಲ್ಲ. ಹೀಗಾಗಿ ಶ್ರದ್ಧೆಯನ್ನು ಜಿಜ್ಞಾಸೆ ಮಾಡಬೇಕು.

**ನಿಷ್ಠೆ:** ಹಾಗಾದರೆ, ಶ್ರದ್ಧೆಯು ಯಾವುದರಿಂದ ಉಂಟಾಗುತ್ತದೆ? ನಿಷ್ಠೆಯಿಂದ ಉಂಟಾಗುತ್ತದೆ. ನಿಷ್ಠೆಯಿರುವವನು ಶ್ರದ್ಧಾನ್ವಿತನಾಗುತ್ತಾನೆ. ನಿಷ್ಠೆಯಿಲ್ಲದಿರುವವನು ಶ್ರದ್ಧಾನ್ವಿತನಾಗಿರುವುದಿಲ್ಲ. ಹೀಗಾಗಿ ನಿಷ್ಠೆಯನ್ನು ಜಿಜ್ಞಾಸೆ ಮಾಡಬೇಕು.

**ಕೃತಿ:** ಯಾರು ಯಾವಾಗ ಏನನ್ನು ಮಾಡುತ್ತಾನೆಯೋ, ಅವನು ಅದರಲ್ಲಿ ನಿಷ್ಠೆಯುಳ್ಳವನಾಗುತ್ತಾನೆ. ಯಾವಾಗ ಹಾಗೆ ಮಾಡುವುದಿಲ್ಲವೋ. ಅವನಿಗೆ ನಿಷ್ಠೆಯುಂಟಾಗುವುದಿಲ್ಲ (**ಯದಾ ವೈ ಕರೋತಿ, ಅಥ ನಿಸ್ತಿಷ್ಠತಿ, ನ ಅಕೃತ್ವಾ ನಿಸ್ತಿಷ್ಠತಿ**). ಹೀಗಾಗಿ ಕೃತಿ (ಕಾರ್ಯ) ಎನ್ನುವುದು ನಿಷ್ಠೆಗಿಂತಲೂ ಹೆಚ್ಚಿನದು. ಹೀಗಾಗಿ ಕೃತಿಯನ್ನೇ ಜಿಜ್ಞಾಸೆ ಮಾಡಬೇಕು. ಕೃತಿ ಎಂದರೆ ಇಂದ್ರಿಯ ಸಂಯಮ ಮತ್ತು ಮನಸ್ಸಿನ ಏಕಾಗ್ರತೆಯನ್ನು ಗಳಿಸಿಕೊಳ್ಳುವುದು. ಇಂಥ ಕೃತಿ ಇದ್ದರೆ ಮಾತ್ರ ಯಾವುದೇ ಸಾಧನೆಗಳನ್ನು ಮಾಡಬಹುದು.

**ಸುಖ:** ಈ ಕೃತಿ ಎನ್ನುವುದು ಉಂಟಾಗುವುದು ಹೇಗೆ? ಸುಖದಿಂದ ಉಂಟಾಗುತ್ತದೆ. ಮಿಗಿಲಾದ ಸುಖವನ್ನು ನಾನು ಪಡೆದುಕೊಳ್ಳಬೇಕು — ಎಂದು ಯಾವಾಗ ಒಬ್ಬನು ಪರಿಗಣಿಸುತ್ತಾನೆಯೋ, ಆಗ ಕೃತಿ ಉಂಟಾಗುತ್ತದೆ. ಲೋಕದಲ್ಲಿ ಸುಖವನ್ನು ಪಡೆದುಕೊಳ್ಳಬೇಕೆಂಬ ಆಸೆಯಿಂದ ಮಾತ್ರವೇ ಕೃತಿಯು ಉಂಟಾಗುತ್ತದೆ. ಸುಖವು ಆಗುವುದು ಮುಂದೆ. ಆದರೂ ಸುಖದ ಇಚ್ಛೆ ಮುಂಚೆಯೇ ಉಂಟಾಗುತ್ತದೆ. ಹೀಗಾಗಿ ಸುಖವನ್ನೇ ಜಿಜ್ಞಾಸೆ ಮಾಡಬೇಕು. ಹೀಗಾಗಿ ನಾರದನು ಸನತ್ಕುಮಾರನಿಗೆ ಪ್ರಾರ್ಥಿಸಿಕೊಳ್ಳುತ್ತಾನೆ: ''ಭಗವಂತನೇ ಹಾಗಾದರೆ ನಾನು ಸುಖವನ್ನು ಜಿಜ್ಞಾಸೆ ಮಾಡುತ್ತೇನೆ.''

**ಭೂಮಾ:** ಆಗ ಸನತ್ಕುಮಾರನು ಉತ್ಕೃಷ್ಟ ಉಪದೇಶವನ್ನು ನೀಡುತ್ತಾನೆ: ''**ಯೋ ವೈ ಭೂಮಾ ತತ್ಸುಖಂ, ನಾಲ್ಪೇ ಸುಖಮಸ್ತಿ, ಭೂಮೈವ ಸುಖಂ, ಭೂಮಾ ತ್ವೇವ ವಿಜಿಜ್ಞಾಸಿತವ್ಯ ಇತಿ, ಭೂಮಾನಂ ಭಗವೋ ವಿಜಿಜ್ಞಾಸ್ವ ಇತಿ**'' — ಯಾವುದು ಭೂಮವೋ (ಭೂಮ ಎಂದರೆ ದೊಡ್ಡದು, ಅದಕ್ಕಿಂತ ಮಿಗಿಲಿಲ್ಲದ್ದು, ಬಹಳ - ಇವೆಲ್ಲ ಪರ್ಯಾಯ ಶಬ್ದಗಳು) ಅದೇ ಸುಖವು. ಅಲ್ಪವಾದುದರಲ್ಲಿ ಸುಖವು ಇರುವುದಿಲ್ಲ. ಇದಕ್ಕೆ ಒಂದು ಮನೋವೈಜ್ಞಾನಿಕ ಕಾರಣ ಇದೆ. ಅಲ್ಪವು ಇನ್ನೂ ಬೇಕು, ಇನ್ನೂ ಬೇಕು ಎಂಬ ತೃಷ್ಣೆಯನ್ನು ಉಂಟುಮಾಡುತ್ತದೆ. ಈ ತೃಷ್ಣೆ ಅಥವಾ ಆಸೆಯೇ ದುಃಖಕ್ಕೆ ಕಾರಣ. ಅಲ್ಪವಾದುದೆಲ್ಲವೂ ದುಃಖಕ್ಕೆ ಕಾರಣ ಎನ್ನುವುದು ಲೋಕಪ್ರಸಿದ್ಧಿಯಾಗಿದೆ. ಇಂಥ ದುಃಖವು ಭೂಮದಲ್ಲಿ ಸಾಧ್ಯವಾಗುವುದಿಲ್ಲ. ಕೇವಲ ಭೂಮದಲ್ಲಿ ಮಾತ್ರವೇ ಸುಖವಿರುವುದು.

ಸನತ್ಕುಮಾರನು ಭೂಮದ ಲಕ್ಷಣಗಳನ್ನು ತಿಳಿಸುತ್ತಾನೆ: ''**ಯತ್ರ ನಾನ್ಯತ್ ಪಶ್ಯತಿ, ನಾನ್ಯತ್ ಶ್ರುಣೋತಿ, ನ ಅನ್ಯದ್ ವಿಜಾನಾತಿ ಸ ಭೂಮಾ, ಅಥ ಯತ್ರ ಅನ್ಯತ್ ಪಶ್ಯತಿ, ಅನ್ಯತ್ ಶ್ರುಣೋತಿ, ಅನ್ಯತ್ ವಿಜಾನಾತಿ, ತದಲ್ಪಂ**'' — 'ಎಲ್ಲಿ ಮತ್ತೊಂದನ್ನು ಕಾಣದಿರುವನೋ, ಮತ್ತೊಂದನ್ನು ಕೇಳದಿರುವನೋ

ಮತ್ತೊಂದನ್ನು ಅರಿಯದಿರುವನೋ ಅದೇ ಭೂಮವು. ಇನ್ನು ಎಲ್ಲಿ ಮತ್ತೊಂದನ್ನು ಕಾಣುತ್ತಾನೋ, ಮತ್ತೊಂದನ್ನು ಕೇಳುತ್ತಾನೋ, ಮತ್ತೊಂದನ್ನು ಅರಿಯುತ್ತಾನೋ ಅದು ಅಲ್ಪವು.'

ಮುಂದುವರಿದು ಗುರು ಉಪದೇಶ ಮಾಡುತ್ತಾನೆ : ''**ಯೋ ವೈ ಭೂಮಾ ತದಮೃತಮ್, ಅಥ ಯದಲ್ಪಂ ತತ್ ಮರ್ತ್ಯಂ**'' — 'ಮಗೂ, ನಾರದ, ಯಾವುದು ಭೂಮವೋ, ಅದು ಅಮೃತವು. ಯಾವುದು ಅಲ್ಪವೋ ಅದು ಮರ್ತ್ಯವು. ಒಟ್ಟಿನಲ್ಲಿ ಅಲ್ಪವು ಅವಿದ್ಯಾವಿಷಯ. ಭೂಮವೆಂಬುದು ವಿದ್ಯೆಯ ವಿಷಯ. ಅಲ್ಪವೆಂಬುದು ಸ್ವಪ್ನದಂತೆ ಭ್ರಮೆಯ ವಸ್ತು. ಇದಕ್ಕೆ ವಿಪರೀತವಾದದ್ದೇ ಭೂಮ. ಇದೇ ಅಮೃತವಾದದ್ದು.''

ನಾರದರು ಮುಂದೆ ಪ್ರಶ್ನಿಸುತ್ತಾರೆ: ''ಹಾಗಾದರೆ, ಇಂಥ ಸ್ವರೂಪವಿರುವ ಈ ಭೂಮವು ಯಾವುದರಲ್ಲಿ ಪ್ರತಿಷ್ಠಿತವಾಗಿರುತ್ತದೆ?'' ಅದಕ್ಕೆ ಸನತ್ಕುಮಾರರು ಉತ್ತರಿಸುತ್ತಾರೆ: ''**ಸ್ವೇ ಮಹಿಮ್ನಿ ಯದಿ ವಾ ನ ಮಹಿಮ್ನೀತಿ**'' — 'ಭೂಮವು ತನ್ನದೇ ಆದ ಮಹಿಮೆಯಲ್ಲಿ, ಮಾಹಾತ್ಮ್ಯದಲ್ಲಿ ಅಥವಾ ವಿಭೂತಿಯಲ್ಲಿ ಪ್ರತಿಷ್ಠಿತವಾಗಿದೆ.' ಇನ್ನೊಂದು ದೃಷ್ಟಿಯಿಂದ ನೋಡುವುದಾದರೆ, ಭೂಮವು ತನ್ನ ಮಹಿಮೆಯಲ್ಲಿಯೂ ಪ್ರತಿಷ್ಠಿತವಾಗಿಲ್ಲ. ಭೂಮವು ಅಪ್ರತಿಷ್ಠವಾದುದು; ಅದು ಯಾವುದನ್ನೂ ಆಶ್ರಯಿಸಿಕೊಂಡಿಲ್ಲ ಎಂದು ಇದರರ್ಥ. ಇದಕ್ಕೆ ಇನ್ನೊಂದು ವಿವರಣೆಯನ್ನು ಕೂಡ ಕೊಡಬಹುದು. ಭೂಮವೇ ಎಲ್ಲೆಲ್ಲೂ ಇರುವುದು. ಹೀಗಾಗಿ ಅದಕ್ಕೆ ಯಾವುದೇ ಆಧಾರ ಅಥವಾ ಭೂಮಿಕೆಯು ಇರುವುದು ಸಾಧ್ಯವೇ ಇಲ್ಲ.

**ಅಹಂಕಾರಾದೇಶ:** ಈ ಭೂಮವೆಂಬ ಬ್ರಹ್ಮವೇ ಕೆಳಗಿರುವುದು; ಅದೇ ಮೇಲೆ ಇರುವುದು; ಅದೇ ಹಿಂದೆಯೂ ಮುಂದೆಯೂ ಇರುವುದು. ಅದೇ ಬಲಕ್ಕೂ ಎಡಕ್ಕೂ ಇರುವುದು. **ಸ ಏವೇದಗ್ಂ ಸರ್ವಮ್** — ಇದೇ ಎಲ್ಲವೂ ಆಗಿದೆ. ಈ ಭೂಮ ಎನ್ನುವುದು 'ಅಹಂಕಾರಾದೇಶವು', ಅಂದರೆ ನೋಡುವ ಜೀವನಿಗಿಂತ ಬೇರೆಯಲ್ಲ, ಇದರರ್ಥ, ನಾನೇ ಆ ಭೂಮವಾಗಿದ್ದೇನೆ ಎಂದು. ಹಾಗೆಂದೇ ಉಪದೇಶ ಹೀಗೆ ಮುಂದುವರಿಯುತ್ತದೆ: ''**ಅಹಮೇವ ಅಧಸ್ತಾತ್, ಅಹಮ್ ಉಪರಿಷ್ಟಾತ್, ಪಶ್ಚಾದಹಂ, ಪುರಸ್ತಾದಹಂ, ದಕ್ಷಿಣತಃ ಅಹಮ್, ಉತ್ತರತಃ ಅಹಂ, ಅಹಮೇವ ಇದಂ ಸರ್ವಮಿತಿ**'' – ನಾನೇ ಕೆಳಗೆ, ನಾನೇ ಮೇಲೆ, ನಾನೇ ಹಿಂದೆ, ನಾನೇ ಮುಂದೆ, ನಾನೇ ಬಲಕ್ಕೆ, ನಾನೇ ಎಡಕ್ಕೆ. ನಾನೇ ಇದೆಲ್ಲವೂ.

**ಆತ್ಮಾದೇಶ:** ಮೇಲಿನ ಉಪದೇಶಕ್ಕೆ ಅಹಂಕಾರಾದೇಶ ಎಂದು ಹೆಸರು. ಸನತ್ಕುಮಾರನು ಇದು ಆತ್ಮಾದೇಶ ಕೂಡ ಎಂದು ನಾರದನಿಗೆ ವಿವರಿಸುತ್ತಾನೆ. ಅಂದರೆ ಭೂಮವೆಂಬುದು ಜೀವರೂಪದಲ್ಲಿ ಜಗತ್ತನ್ನು ಪ್ರವೇಶಿಸಿರುವ ಆತ್ಮ ಅಥವಾ ಬ್ರಹ್ಮವೇ ಆಗಿದೆ. ದೇಹ, ಮನಸ್ಸುಗಳಿಗೆ ಚೈತನ್ಯದಾಯಕವಾಗಿರುವುದು ಕೂಡ ಇದೇ. ಹಾಗೆಂದೇ ಸನತ್ಕುಮಾರನು ಉಪದೇಶಿಸುತ್ತಾನೆ: ''**ಅಥಾತ ಆತ್ಮಾದೇಶ ಏವ ಆತ್ಮೈವ ಅಧಸ್ತಾತ್, ಆತ್ಮ ಉಪರಿಷ್ಟಾತ್, ಆತ್ಮಾ ಪಶ್ಚಾದ್, ಆತ್ಮಾ ಪುರಸ್ತಾತ್, ಆತ್ಮಾ ದಕ್ಷಿಣತಃ, ಆತ್ಮಾ ಉತ್ತರತಃ, ಆತ್ಮೈವ ಇದಂ ಸರ್ವಮ್**'' – ಆದ್ದರಿಂದ ಇದು ಆತ್ಮಾದೇಶವೇ ಆಗಿದೆ. ಆತ್ಮವೇ ಕೆಳಗೆ, ಆತ್ಮನೇ ಮೇಲೆ; ಆತ್ಮನೇ ಹಿಂದೆ, ಆತ್ಮನೇ ಮುಂದೆ; ಆತ್ಮನೇ ಬಲಕ್ಕೆ, ಆತ್ಮನೇ ಎಡಕ್ಕೆ; ಆತ್ಮವೇ ಇದೆಲ್ಲವೂ.

ಹೀಗೆ ಜನ್ಮರಹಿತವೂ ಎಲ್ಲೆಲ್ಲೂ ಆಕಾಶದಂತೆ ತುಂಬಿಕೊಂಡಿರುವುದೂ ಆಗಿರುವ ಆತ್ಮನನ್ನು ಮನನ ಮತ್ತು ವಿಜ್ಞಾನಗಳಿಂದ ಕಂಡುಕೊಂಡಿರುವ ಜ್ಞಾನಿಯು ಆತ್ಮನಲ್ಲಿಯೇ ಸಂತೋಷವನ್ನು ಪಡೆದುಕೊಳ್ಳುತ್ತಾನೆ (**ಆತ್ಮರತಿ**). ಆತ್ಮಜ್ಞಾನನಿಮಿತ್ತವಾಗಿಯೇ ಕ್ರೀಡೆಯನ್ನು ಆಡುತ್ತಾನೆ (ಆತ್ಮಕ್ರೀಡ). ಅವನೇ **ಆತ್ಮಮಿಥುನನು, ಆತ್ಮಾನಂದ**ನು. ಅವನು ಆತ್ಮವೆಂಬ ತನ್ನದೇ ರಾಜ್ಯದ ಅಧಿಪತಿ (ಸ್ವರಾಟ್). ಬೇರೆಯವರಿಗೆ ಮತ್ತೊಬ್ಬನು ರಾಜನಾಗಿರುತ್ತಾನೆ. ಆದರೆ ಇವನಿಗೆ ತಾನೇ ರಾಜನಾಗಿರುವನು. ಹಾಗೆಂದೇ ಅವನು ಸ್ವರಾಟ್.

ಹಿಂದೆ ಹೇಳಿದ ಎಲ್ಲವೂ ಹೊರಗೆ ಬಂದಿರುವುದು ಆತ್ಮನಿಂದಲೇ. ಹೀಗೆ ಜ್ಞಾನಿಯು ಕಂಡುಕೊಂಡಿರುವ, ಮನನ ಮಾಡಿರುವ ಹಾಗೂ ಅರಿತುಕೊಂಡಿರುವ ಈ ಆತ್ಮನಿಂದಲೇ ಪ್ರಾಣ, ಆಶೆ, ಸ್ಮರಣ, ಆಕಾಶ, ತೇಜಸ್ಸು, ಜಲ, ಆವಿರ್ಭಾವ ತಿರೋಭಾವಗಳು, ಅನ್ನ, ಬಲ, ವಿಜ್ಞಾನ, ಧ್ಯಾನ, ಚಿತ್ತ, ಸಂಕಲ್ಪ, ಮನಸ್ಸು, ವಾಕ್ಕು, ನಾಮ, ಮಂತ್ರಗಳು, ಕರ್ಮಗಳು – ಎಲ್ಲವೂ ಹೊರಗೆ ಬಂದಿವೆ. **ಆತ್ಮ ಅತಃ ಏವ ಇದಗ್ಂ ಸರ್ವಂ** – ಆತ್ಮನಿಂದಲೇ ಇದೆಲ್ಲವೂ ಆಗಿರುವುದು.

ಉಪಸಂಹಾರ ರೂಪದಲ್ಲಿ ಆತ್ಮಜ್ಞಾನದ ಮಹಿಮೆಯನ್ನು ಶ್ರುತಿಯು ಹೇಳುತ್ತದೆ: ಜ್ಞಾನಿಯು ಮೃತ್ಯುವನ್ನು ಕಾಣುವುದಿಲ್ಲ; ರೋಗವನ್ನು ಕಾಣುವುದಿಲ್ಲ; ದುಃಖವನ್ನು ಕಾಣುವುದಿಲ್ಲ. ಜ್ಞಾನಿಯು ಎಲ್ಲವನ್ನೂ ಕಾಣುತ್ತಾನೆ; ಸರ್ವವನ್ನೂ ಪಡೆದುಕೊಳ್ಳುತ್ತಾನೆ.

ಹೀಗೆ ತನ್ನ ಮನಸ್ಸಿನ ಕೊಳೆಗಳೆಲ್ಲವನ್ನೂ ಕಳೆದುಕೊಂಡ ನಾರದನಿಗೆ ಜ್ಞಾನಿಗಳಾದ ಸನತ್ಕುಮಾರರು ಸಂಸಾರದ ಆಚೆಯ ದಡವಾದ ಮೋಕ್ಷವನ್ನು ತೋರಿಸಿಕೊಡುತ್ತಾರೆ.

ಅದ್ಭುತವಾದ, ಯುಕ್ತಿಪೂರ್ಣವಾದ, ವಿಶಾಲವಾದ, ಭವ್ಯ ಭಾವನೆಗಳು ವೇದಾಂತದಲ್ಲಿ ಮಾತ್ರ ದೊರಕುವುವು. ಮಾನವನ ಅತಿ ಅದ್ಭುತ ಕೃತಿ ಇದು. ಇದೇ ದೇವವಾಣಿ, ಇದೇ ಉಪನಿಷತ್ತು. ಆಧುನಿಕ ಕಾಲದಲ್ಲಿ ಉಪನಿಷತ್ತಿನ ಭಾವನೆಗಳು ಮಾತ್ರ ಸುಸಂಸ್ಕೃತ ಮಾನವಕುಲಕ್ಕೆ ಶ್ರದ್ಧಾಭಕ್ತಿಗಳನ್ನು ಕೊಡಬಲ್ಲವು. — ಸ್ವಾಮಿ ವಿವೇಕಾನಂದ